**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :26 ಸಿಡಬ್ಲು :37

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ.ಯಮನಪ್ಪ ದೇವನ್ನವರ |
| ತಂದೆಯ ಹೆಸರು | : | ದಿವಂಗತ ಶ್ರೀ.ದುಂಡಪ್ಪ |
| ವಯಸ್ಸು | : | 64 ವರ್ಷ |
| ಉದ್ಯೋಗ | : | ನಿವೃತ್ತ ಬಿಲ್ ಕಲೆಕ್ಟರ |
| ವಾಸ್ತವ್ಯ | : | ಹಿಡಕಲ್ |
| ದಿನಾಂಕ | : | 04-11-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

2005 ರಿಂದ 2022 ರವರೆಗೆ ನಾನು ಮುಗಳಖೋಡ ಪುರಸಭೆಯಲ್ಲಿ ದ್ವಿತಿಯ ದರ್ಜೆ ಸಹಾಯಕರು ಮತ್ತು ಬಿಲ್ ಕಲೆಕ್ಟರ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ಚಾಸಾಃ 35 ಸತ್ಯನಾರಾಯಾಣರಾವ್ ಅವರು ಪುರಸಭೆಯಲ್ಲಿ ಚೇಫ್ ಆಫೀಸರ್ ಆಗಿ ದಿನಾಂಕಃ 06-08-2017 ರಿಂದ ಸುಮಾರು 7-8 ತಿಂಗಳು ಕರ್ತವ್ಯ ನಿರ್ವಹಿಸಿದ್ದರು. ಚಾಸಾಃ 36 ಮಹಾಂತೇಶ ಗೊಳಸಂಗಿ ಅವರು 2017 ರಲ್ಲಿ ಪುರಸಭೆಯ ಅಧ್ಯಕ್ಷರಾಗಿದ್ದರು. ಚಾಸಾಃ 38 ಶಂಕರ ಅವರು ಸಹ ಪುರಸಭೆಯ ಬಿಲ್ ಕಲೆಕ್ಟರ ಆಗಿದ್ದು, ಈಗ ಎರಡು ತಿಂಗಳ ಹಿಂದೆ ತೀರಿಕೊಂಡಿದ್ದಾರೆ. ಚಾಸಾಃ 39 ಸಯ್ಯದ್ ನದಾಫ್ ಅವರು ಪುರಸಭೆಯ ಸಿಪಾಯಿ ಆಗಿದ್ದರು.

3. ಇಂದು ನ್ಯಾಯಾಲಯಕ್ಕೆ ಹಾಜರಾಗಿರುವ 1 ನೇ ಆರೋಪಿ ರಾವಸಾಬ ಬಾಬನ್ನವರು, 3 ನೇ ಆರೋಪಿ ನೇಮಿನಾಥ ಬಾಬನ್ನವರ, 5 ನೇ ಆರೋಪಿ ಅಜಿತ ಬಾಬನ್ನವರ, 8 ನೇ ಆರೋಪಿ ಪೊನ್ನಂಜಿ ಬಾಬನ್ನವರ, 16 ನೇ ಆರೋಪಿ ರವಿ ಹುಲ್ಲೋಳ್ಳಿ, 19 ನೇ ಆರೋಪಿ ಅಣ್ಣಾಸಾಬ ಬಾಬನ್ನವರ ಅವರು ನನಗೆ ಗೊತ್ತಿರುತ್ತಾರೆ. ಉಳಿದ ಆರೋಪಿತರು ನನಗೆ ಗೊತ್ತಿರುವುದಿಲ್ಲ.

4. ಮುಗಳಖೋಡ ಗ್ರಾಮದ ಕೆರೆ ಪಕ್ಕದಲ್ಲಿ ಗರಡಿ ಮನೆ ಪಕ್ಕ ಇರುವ ಖಾಲಿ ನಿವೇಶನದಲ್ಲಿ ಜೈನ ಸಮಾಜದವರಿಗೂ, ಮಾದರ ಸಮಾಜದವರಿಗೂ ಜಗಳ ಇತ್ತು. ನಿವೇಶನ ಸಂಖ್ಯೆ 643 ನೇ ನಿವೇಶನಕ್ಕೆ ಸಂಬಂಧಿಸಿದಂತೆ ಎರಡೂ ಸಮಾಜದವರು ತಮಗೆ ಸೇರಿದ್ದು ಎಂದು ಹೇಳಿಕೊಂಡು ಜಗಳ ಮಾಡುತ್ತಿರುತ್ತಾರೆ, ಅದು ಪುರಸಭೆಯ ಗಮನದಲ್ಲಿಯೂ ಸಹ ಇದೆ.

5. ನಿವೇಶನ ಸಂಖ್ಯೆ 643 ಕ್ಕೆ ಸಂಬಂಧಿಸಿದಂತೆ ಪುರಸಭೆಯಲ್ಲಿ ಕಡತವನ್ನೇ ಇರಿಸಲಾಗಿದೆ. ಎರಡೂ ಸಮಾಜದವರು ಹಾಜರುಪಡಿಸಿದ ದಾಖಲೆಗಳನ್ನು ಆ ಕಡತದಲ್ಲಿ ಇರಿಸಲಾಗಿದೆ. ಪುರಸಭೆ ವತಿಯಿಂದ ಎರಡೂ ಸಮಾಜದವರಿಗೆ ನೋಟಿಸ ನೀಡಿದ ಬಗ್ಗೆ ನನಗೆ ನೆನಪಿರುವುದಿಲ್ಲ. ವಿವಾದಿತ ಸ್ಥಳದ ಸರ್ವೇ ಆದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಿವಾದಿತ ಸ್ಥಳದಲ್ಲಿ ಕಟ್ಟಡ ಕಟ್ಟಲು ಅನುಮತಿ ನೀಡಲಾಗಿತ್ತೇ ಎನ್ನುವುದಕ್ಕೆ ಸಾಕ್ಷಿ ನಾನು ಕಡತವನ್ನು ಪರಿಶೀಲಿಸಿ ಹೇಳಬೇಕು ಎಂದು ಹೇಳಿದ್ದಾರೆ. ಪುರಸಭೆಯಲ್ಲಿ ದಾಖಲೆಗಳ ಆವಕ-ಜಾವಕ ಪುಸ್ತಕ ನಾನೇ ಬರೆಯುತ್ತಿದ್ದೇನು. ಕಡತಗಳ ನಿರ್ವಹಣೆಯನ್ನೂ ಸಹ ಮುಖ್ಯ ಅಧಿಕಾರಿಗಳ ಆದೇಶದ ಮೇರೆಗೆ ನಾನೇ ಮಾಡುತ್ತಿದ್ದೇನು.

6. 2017 ರಲ್ಲಿ ವಿವಾದಿತ ನಿವೇಶನಕ್ಕೆ ಸಂಬಂಧಿಸಿದಂತೆ ಮಾದರ ಸಮಾಜದವರು ಹಾಗೂ ಜೈನ ಸಮಾಜದವರಿಗೂ ಗಲಾಟೆ ಆದ ವಿಚಾರ ನನಗೆ ಗೊತ್ತಿರುತ್ತದೆ. ಗಲಾಟೆ ಆದ ನಂತರ ಮಾದರ ಸಮಾಜದರವರು ಪುರಸಭೆಗೆ ಬಂದು ಮುಖ್ಯಾಧಿಕಾರಿಯವರನ್ನು ಭೇಟಿ

ಆಗಿದ್ದರು. ಅವರು ಏನು ಮಾತನಾಡಿದರು ಎಂದು ನನಗೆ ಗೊತ್ತಿಲ್ಲ. ನಂತರ ಚೀಫ್ ಆಫೀಸರ ಅವರು ಸ್ಥಳಕ್ಕೆ ಭೇಟಿ ನೀಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ.

7. ಮಾದರ ಸಮಾಜದವರು ಪುರಸಭೆಗೆ ಭೇಟಿ ನೀಡಿದ ನಂತರ ನಾನು ವಿವಾದಿತ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ. ವಿವಾದಿತ ನಿವೇಶನಕ್ಕೆ ಸಂಬಂಧಿಸಿದಂತೆ ಎರಡೂ ಸಮಾಜದವರು ಒಬ್ಬರ ವಿರುದ್ಧ ಒಬ್ಬರು ಪೋಲಿಸ ಠಾಣೆಗೆ ದೂರು ಕೊಟ್ಟ ವಿಚಾರ ನನಗೆ ಗೊತ್ತಿರುತ್ತದೆ. ಆ ಎರಡೂ ಪ್ರಕರಣಗಳಲ್ಲಿ ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ಈಗ ಹೇಳಿದ ವಿಚಾರವನ್ನು ಹೊರತುಪಡಿಸಿ ನಾನು ಪೋಲಿಸರ ಮುಂದೆ ಬೇರೆ ವಿಚಾರ ಹೇಳಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**).

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 28-08-2017 ರಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿ. ಆ ಹೇಳಿಕೆಯಲ್ಲಿ "ಮುಗಳಖೋಡ ಗ್ರಾಮ ಹದ್ದಿಯಲ್ಲಿ ಸರ್ಕಾರಿ ಆಸ್ಪತ್ರೆಗೆ ಹೋಗುವ ರಸ್ತೆಯ ಪಕ್ಕದಲ್ಲಿರುವ ಮಾದರ ಓಣಿಯಲ್ಲಿ ಯಲ್ಲಮ್ಮ ದೇವಿ ಪಾದುಕಟ್ಟೆಯ ಹತ್ತಿರ ಇರುವ ಜಾಗ " ಎಂದು ಹೇಳಿದ್ದೇನೆ ಎಂದು ಸೂಚಿಸುವುದು ಸರಿ.

2. " ನಮ್ಮೂರಿನ ಜೈನ ಸಮಾಜದವರಾದ ಬಾಬನ್ನವರ ಮತ್ತು ಅವರ ಮನೆಯವರು ಆ ಜಾಗೆ ತಮ್ಮದು ಇರುತ್ತದೆ ಅಂತಾ ಕಟ್ಟಡ ಕಟ್ಟಲು ಪ್ರಾರಂಭ ಮಾಡಿದ್ದರಿಂದ ಮಾದಿಗ ಸಮುದಾಯದ ಜನರು ಪುರಸಭೆಯಲ್ಲಿ ತಕರಾರು ನೀಡಿದ್ದರಿಂದ ಅಲ್ಲಿ ಕೆಲಸ ಮಾಡುವುದನ್ನು ಬಂದ್ ಮಾಡಿದ್ದರು." ಎಂದು ನಾನು ಹೇಳಿದ್ದೇನೆ ಎನ್ನುವುದು ಸರಿ.

3. ದಿನಾಂಕಃ 23-06-2017 ರಂದು ಈ ಮೊದಲು ಇದ್ದ ಪುರಸಭೆಯ ಮುಖ್ಯಾಧಿಕಾರಿ ಖಿಲಾರೆ ಅವರು ಸದರಿ ಜಾಗದಲ್ಲಿ ಕಟ್ಟಡ ಕಟ್ಟಲು ಶ್ರೀಮಂತ ನೇಮನ್ನ ಬಾಬನ್ನವರ ಮತ್ತು ರಾವಸಾಬ ಲಕ್ಷ್ಮಣ ಬಾಬನ್ನವರ ಇವರಿಗೆ ಕಟ್ಟಡ ಕಟ್ಟಲು ಪರ್ಮಿಶನ್ ಕೊಟ್ಟಿದ್ದರು ಎಂದು ಹೇಳಿಕೆ ನೀಡಿರುತ್ತೀರಿ ಎನ್ನುವುದಕ್ಕೆ ಸಾಕ್ಷಿ ಹೌದು ಎಂದು ಉತ್ತರಿಸಿ ಮುಂದುವರೆದು ನಾನು ಕಡತವನ್ನು ನೋಡಬೇಕಾಗುತ್ತದೆ ಎಂದು ಹೇಳಿದ್ದಾರೆ.

4. ದಿನಾಂಕಃ 29-06-2017 ರಂದು ಬಾಬನ್ನವರ ಇವರಿಗೆ ನೀಡಿದ ಪರ್ಮಿಶನ್‌ನ್ನು ರದ್ದುಪಡಿಸಿದ್ದರು ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೀರಿ ಎನ್ನುವುದಕ್ಕೆ ಸಾಕ್ಷಿ ಈಗ ಸುಮಾರು ವರ್ಷಗಳು ಆಗಿರುತ್ತದೆ, ನನಗೆ ನೆನಪಿರುವುದಿಲ್ಲ ಎಂದು ಹೇಳಿದ್ದಾರೆ.

5. ರದ್ದು ಪಡಿಸಿದ ನೋಟಿಸನ್ನು ನಮ್ಮ ಕಾರ್ಯಾಲಯದ ಸಿಪಾಯಿ ಸಯ್ಯದ್ ನದಾಫ್ ಅವರ ಮುಖಾಂತರ ಬಾಬನ್ನವರ ಅವರಿಗೆ ನೀಡುವಂತೆ ಕಳುಹಿಸಿಕೊಟ್ಟಿದ್ದೇನೆ ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿ. ಸದರಿ ನೋಟಿಸನ್ನು ಬಾಬನ್ನವರ ಅವರು ತೆಗೆದುಕೊಂಡಿಲ್ಲ ಎಂದು ಹೇಳಿದ್ದೇನೆ ಎನ್ನುವುದು ಸರಿ. ಆದ್ದರಿಂದ ಸದರಿ ನೋಟಿಸಗಳನ್ನು ರಜಿಸ್ಟರ ಪೋಸ್ಟ ಮೂಲಕ ಕಳುಹಿಸಿದ್ದು ಅದನ್ನೂ ಸಹ ಬಾಬನ್ನವರ ಅವರು ಸ್ವೀಕರಿಸಲು ನಿರಾಕರಿಸಿದ್ದರು ಎಂದು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿದ್ದೇನೆ ಎನ್ನುವುದು ಸರಿ.

6. ದಿನಾಂಕಃ 26-08-2017 ರಂದು ಮುಂಜಾನೆ 9:30 ಗಂಟೆಯಿಂದ 10:00 ಗಂಟೆ ಸಮಾರಿಗೆ ನಾನು ಪುರಸಭೆ ಕಾರ್ಯಾಲಯದಲ್ಲಿದ್ದಾಗ ನಮ್ಮೂರಿನ ಮಾದಿಗ ಸಮಾಜದ 50-60 ಜನ ಗಂಡಸರು ಮತ್ತು ಹೆಂಗಸರು ಬಂದಿದ್ದರು ಎನ್ನುವುದಕ್ಕೆ ಸಾಕ್ಷಿ ತಂಟೆ ಆದ ನಂತರ ಬಂದಿದ್ದರು, ನನಗೆ ಸಮಯ ಗೊತ್ತಿಲ್ಲ ಎಂದು ಹೇಳಿದ್ದಾರೆ. ನಾನು 10:00

ಗಂಟೆ ಸಮಯದಲ್ಲಿ ಮಾದರ ಸಮಾಜದವರು ಬಂದಿದ್ದರು ಎನ್ನುವುದು ನನಗೆ ಈಗ ನೆನಪಿಲ್ಲ. ಆ ರೀತಿ ನಾನು ಪೋಲಿಸರಿಗೆ ಹೇಳಿಕೆ ಕೊಟ್ಟ ಬಗ್ಗೆ ನನಗೆ ನೆನಪಿಲ್ಲ.

7. ಚಾಸಾಃ 36 ಸತ್ಯನಾರಾಯಣ ಅವರು ಹೊಸದಾಗಿ ಬಂದಿರುವುದರಿಂದ ನನಗೆ ಮತ್ತು ಚಾಸಾಃ 38 ಶಂಕರ ಲಕ್ಷ್ಮೇಶ್ವರ ಅವರಿಗೆ ತಕರಾರಿನ ಬಗ್ಗೆ ಮಾಹಿತಿ ಕೇಳಿದ್ದರು ಎನ್ನುವುದು ಸರಿ. ಆಗ ನಾನು ಕಡತವನ್ನು ತೋರಿಸಿದ್ದೇನು ಎನ್ನುವುದು ಸರಿ. ಆ ಸಮಯದಲ್ಲಿ ಅಧ್ಯಕ್ಷರಾದ ಗೊಳಸಂಗಿ ಅವರು ಸಹ ಇದ್ದರು ಎನ್ನುವುದು ನನಗೆ ಅಷ್ಟಾಗಿ ನೆನಪಿರುವುದಿಲ್ಲ.

8. ನಾನು ಕಡತ ತೋರಿಸಿದ ನಂತರ ಚಾಸಾಃ 36 ರವರು ಮೋಟರಸೈಕಲನಲ್ಲಿ ವಿವಾದಿತ ಸ್ಥಳಕ್ಕೆ ಭೇಟಿ ನೀಡಿದ್ದರು ಎನ್ನುವುದಕ್ಕೆ ಸಾಕ್ಷಿ ಅವರು ನಮಗೆ ಬರಲು ಹೇಳಿ ಹೋದರು, ಯಾವುದರಲ್ಲಿ ಹೋದರು ಎಂದು ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಚೀಫ್ ಆಫೀಸರ ಹೋದ ನಂತರ ನಾನು ಮತ್ತು ಚಾಸಾಃ 38 ರವರು ವಿವಾದಿತ ಸ್ಥಳಕ್ಕೆ ನಡೆದುಕೊಂಡು ಹೋಗಿದ್ದೇವೆ ಎನ್ನುವುದು ಸರಿ. ಸ್ಥಳದಲ್ಲಿ ಎರಡೂ ಸಮಾಜದವರು ಇದ್ದರು ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿ.

9. ಸ್ಥಳಕ್ಕೆ ಭೇಟಿ ನೀಡಿದ ನಂತರ ಚಾಸಾಃ 36 ರವರು ಬಾಬನ್ನವರ ಅವರಿಗೆ ಸ್ಥಳದ ಬಗ್ಗೆ ದಾಖಲೆಗಳು ಇದ್ದರೆ ನೀಡುವಂತೆ ಕೇಳಿದರು ಎನ್ನುವುದು ನನಗೆ ಗೊತ್ತಿರುವುದಿಲ್ಲ. ಆ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುವ ಬಗ್ಗೆ ಈಗ ನನಗೆ ನೆನಪಿರುವುದಿಲ್ಲ. ಸ್ಥಳದಲ್ಲಿ ನಾವು ಇದ್ದಾಗ ಎರಡೂ ಸಮಾಜದವರು ಬಾಯಿ ಮಾತಿನಲ್ಲಿ ಜಗಳ ಮಾಡಿಕೊಳ್ಳುತ್ತಿದ್ದರು, ನಾವು ಸ್ಥಳದಿಂದ ವಾಪಸ್ ಬಂದಿದ್ದೇವೆ ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿ. ನಾವು ಕಚೇರಿಗೆ ಬಂದ ನಂತರ ಎರಡೂ ಸಮಾಜದವರು ಹೊಡೆದಾಡಿಕೊಂಡು, ದೂರು ನೀಡಿದ್ದಾರೆ ಎನ್ನುವ ವಿಚಾರ ಗೊತ್ತಾಯಿತು ಎನ್ನುವುದು ಸರಿ.

**ಪಾಟೀ ಸವಾಲುಃ 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ**

ನಾನು ಬೆಳಗ್ಗೆ 10:30 ರಿಂದ 1:30 ಗಂಟೆಯವರೆಗೆ ಬಿಲ್ ಕಲೆಕ್ಟ ಮಾಡಲು ಹೋಗುತ್ತೇನೆ. ವಿವಾದಿತ ಸ್ಥಳವಾದ ನಿವೇಶನ ಸಂಖ್ಯೆ 643 ಮೊದಲಿಗೆ ಬಾಬನ್ನವರ ಅವರ ಕುಟುಂಬಕ್ಕೆ ಸೇರಿತ್ತು ಎನ್ನುವುದು ಸರಿ. ಮಾದರ ಓಣಿಯಲ್ಲಿ ಯಲ್ಲಮ್ಮ ದೇವಿ ಪಾದುಕಟ್ಟೆಯ ಹತ್ತಿರ ಇರುವ ಜಾಗದ ಸಂಖ್ಯೆಯೇ 643 ಎನ್ನುವುದು ಸರಿ.

2. ಬಾಬನ್ನವರ 4 ಜನ ಅಣ್ಣ ತಮ್ಮಂದಿರು ಪುರಸಭೆಗೆ ಅರ್ಜಿ ಕೊಟ್ಟು ನಿವೇಶನ ಸಂಖ್ಯೆ 643 ರಲ್ಲಿ ಕಟ್ಟಡ ಕಟ್ಟಲು ಅನುಮತಿ ಕೋರಿದ್ದರು ಎನ್ನುವುದು ಸರಿ. ಅದಕ್ಕೆ ಸಂಬಂಧಿಸಿದಂತೆ ಪುರಸಭೆಗೆ ತೆರಿಗೆಯನ್ನು ತುಂಬಿದ್ದರು ಎನ್ನುವುದು ಸರಿ. ಕಟ್ಟಡದ ನೀಲಿ ನಕ್ಷೆಯನ್ನು ಹಾಜರುಮಾಡಿ ಅನುಮತಿ ಕೋರಿದ್ದರು ಎನ್ನುವುದು ಸರಿ. ನಿವೇಶನ ಸಂಖ್ಯೆ 643 ರಲ್ಲಿ ಅನುಮತಿ ನೀಡುವಾಗ ತಂಟೆ ತಕರಾರು ಇರಲಿಲ್ಲ, ಆ ನಂತರ ಎರಡೂ ಸಮಾಜದವರಿಗೆ ತಂಟೆ ತಕರಾರು ಬಂತು ಎಂದು ಹೇಳಿದ್ದಾರೆ.

3. ಅನುಮತಿ ರದ್ದಾದ ನೋಟಿಸನ್ನು ನಾನು ಸಿಪಾಯಿ ಮುಖಾಂತರ ಬಾಬನ್ನವರರಿಗೆ ಕಳುಹಿಸಿಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಬಾಬನ್ನವರ ಅವರು ಆ ನೋಟಿಸನ್ನು ತೆಗೆದುಕೊಳ್ಳದ ಕಾರಣ ರಜಿಸ್ಟರ ಪೋಸ್ಟ ಮೂಲಕ ರದ್ದಾದ ಆದೇಶವನ್ನು ಕಳುಹಿಸಿಕೊಟ್ಟಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

4. ದಿನಾಂಕಃ 26-08-2017 ರಂದು ನಾನು ಕರ ವಸೂಲಿಗೆ ಹೋಗಿದ್ದೇನು ಎನ್ನುವುದು ಸರಿ. ಆ ದಿನ ಮಾದರ ಸಮಾಜದವರು ನಮ್ಮ ಕಚೇರಿಗೆ ಬಂದ ವಿಚಾರ ನನಗೆ ಗೊತ್ತಿಲ್ಲ ಎನ್ನುವುದು ಸರಿ. ಮುಖ್ಯಾಧಿಕಾರಿಗಳು ಸ್ಥಳಕ್ಕೆ ಹೋದ ವಿಚಾರ ನನಗೆ ಗೊತ್ತಿಲ್ಲ

ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ನಾನು ಮುಂದೆ ಹೋಗಿರುತ್ತೇನೆ ನೀವು ಬನ್ನಿ ಎಂದು ಹೇಳಿ ಹೋಗಿದ್ದರು ಎಂದು ಉತ್ತರಿಸಿದ್ದಾರೆ. ನಾನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳಿಕೆ ನೀಡುತ್ತಿದ್ದೇನೆ ಎನ್ನುವುದು ಸರಿ.

5. ನಾನು ಸ್ಥಳಕ್ಕೆ ಹೋಗಿರಲಿಲ್ಲ ಎನ್ನುವುದು ಸರಿಯಲ್ಲ, ನಾನು ಹೋಗಿದ್ದೇನು. ನೀವು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ ಎನ್ನುವುದಕ್ಕೆ ಸಾಕ್ಷಿ ನನಗೆ ನೆನಪಾಗುತ್ತಿಲ್ಲ ಎಂದು ಹೇಳುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ1 ಮತ್ತು 2 ನೇ ಆರೋಪಿತರ ಪರ ಶ್ರೀ. ಬಿ.ಜಿ.ಜಿ. ವಕೀಲರಿಂದ**

3 ರಿಂದ 34 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 1 ಮತ್ತು 2 ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.